ಓ.ಎಸ್. 37/2016

ಪಿ ಡಬ್ಲ್ಯೂ: 3

ದಿನಾಂಕ. 27-2-2018 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಸಿ ಬಿ ವಕೀಲರಿಂದಃ

ನಮ್ಮ ಊರು ಗೊಲ್ಲರಹಳ್ಳಿ ಕ್ಯಾಂಪ್ ಎಂದರೆ ಸರಿ. ನಮ್ಮ ಊರಿನಿಂದ ಚಿಕ್ಕಯಗಟಿ ಸು.10 ಕಿಮೀ ದೂರದಲ್ಲಿದೆ. ಚಿಕ್ಕಯಗಟಿಯಲ್ಲಿ ನನಗೆ ಹೊಲ ಮನೆ ಇರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತಿನ ಸರ್ವೆ ನಂ.ಚಕ್ಕುಬಂದಿ ವಿಸ್ತೀರ್ಣ ನನಗೆ ಗೊತ್ತಿಲ್ಲ ಎಂದರೆ ಸರಿ. ಚನ್ನಬಸಪ್ಪ ನ ಮಕ್ಕಳು ಎಷ್ಟು ಜನ ಮತ್ತು ಅವರು ಯಾವ ರೀತಿ ವ್ಯವಸ್ದೆಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.ಸಾಕ್ಷಿ ಮುಂದುವರೆದು ಇಬ್ಬರು ಗಂಡು ಮಕ್ಕಳು ಮತ್ತು 6 ಜನ ಹೆಣ್ಣು ಮಕ್ಕಳು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಪಹಣಿ ಪತ್ರಿಕೆಗಳನ್ನು ನಾನು ನೋಡಿರುವುದಿಲ್ಲ. ವಾದಿ ನಮ್ಮ ಊರಿನ ಖಾಯಂ ವಾಸಿ ಎಂದರೆ ಸರಿ. ವಾದಿಯ ಹೆಸರು ಗೊಲ್ಲರಹಳ್ಳಿ ಕ್ಯಾಂಪ್ನ ಮತದಾರರ ಪಟ್ಟಿಯಲ್ಲಿರುತ್ತದೆ ಎಂದರೆಸರಿ. ಸು.30 ವರ್ಷಗಳಿಂದ ವಾದಿ ಅಲ್ಲಿಯೇ ಮತ ಚಲಾವಣೆ ಮಾಡಿರುತ್ತಾಳೆ ಎಂದರೆಸ ರಿ. ವಾದಿಯ ಅಕ್ಕ ನಂಜುಂಡಮ್ಮ ಎನ್ನುವವರನ್ನು ನಮ್ಮ ಊರಿನ ಚನ್ನಬಸಪ್ಪ ಎಂಬುವರಿಗೆ ಮದುವೆಮಾಡಿಕೊಡಲಾಗಿದೆ ಎಂದರೆ ಸರಿ. ಸದರಿ ನಂಜುಂಡಮ್ಮ ಜೀವಂತ ಇದ್ದಾರೆ. ವಾದಿ ಸದರಿ ನಂಜುಂಡಮ್ಮನ ಜೊತೆ ವಾಸ ಇರುತ್ತಾಳೆ ಎಂದರೆ ಸರಿಯಲ್ಲ. ನಮ್ಮ ಮನೆ ಮತ್ತು ವಾದಿಯ ಮನೆ ಹಿಂದೆ ಮುಂದೆ ಇರುತ್ತವೆ ಎಂದರೆ ಸರಿ. ನಮಗೂ ಮತ್ತು ವಾದಿಗೂ ತುಂಬಾ ದಿನಗಳಿಂದ ವಿಶ್ವಾಸ ಎಂದರೆ ಸರಿ. ವಾದಿಯ ಜಮೀನುಗಳಲ್ಲಿ ನಾನು ಕೆಲಸ ಮಾಡುತ್ತೇನೆ ಎಂದರೆ ಸರಿಯಲ್ಲ. ವಾದಿಯ ವಿಶ್ವಾಸಕ್ಕೆ ಕಟ್ಟುಬಿದ್ದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಮಾಣಪತ್ರದಲ್ಲಿ ಬರೆಸಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ನನಗೆ ಏನು ಗೊತ್ತಿಲ್ಲದಿದ್ದರೂ ಸಹ 1 ನೇ ಪ್ರತಿವಾದಿಗೆ ತೊಂದರೆ ನೀಡಲು ವಾದಿಯ ಮಾತುಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಮಾಡಲಾಯಿತು.)

ಓ. ಹೇ.ಕೇ.ಸ.ಇದೆ ಎಂದು ಒಪ್ಪಿರುತ್ತಾರೆ.

ಸಿ/ಸಿ ಪ್ರಧಾನ ಸಿವಿಲ್ ಮತ್ತು ಜೆಎಂಎಫ್‌ಸಿ.,
ಹೊಸದುರ್ಗ.